## ಒಂದನೇ ಅಪರ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ

## ಸಿ ಸಿ ಸಂಖ್ಯೆ 686/2018

ಚಾಸಾ 1  ಫ್ರಾಸಾ 2

| | | |
|---|---|---|
| ಸಾಕ್ಷಿಯ ಹೆಸರು | : | ಹೆಚ್.ಬಿ. ರವಿ |
| ತಂದೆಯ ಹೆಸರು | : | ಹೆಚ್.ಕೆ. ಬಸವರಾಜು |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಮೆಕಾನಿಕ್, ಕೆ.ಇ.ಬಿ. ಕಚೇರಿ |
| ವಾಸ ಸ್ಥಳ | : | ಹಿಟ್ನಳ್ಳಿ ಗ್ರಾಮ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ. |

ದಿನಾಂಕ 16.02.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

### ಮುಖ್ಯ ವಿಚಾರಣೆ: - ಮಾನ್ಯ ಸಸಅ ರವರಿಂದ

ನಾನು 2005 ರಿಂದ 2018 ರವರೆಗೆ ರಾಮಾಪುರದಲ್ಲಿ ಲೈನ್ ಮ್ಯಾನ್ ಆಗಿ ಕೆಲಸ ಮಾಡಿರುತ್ತೇನೆ. ನನಗೆ ಚಾಸಾ-2 ರಿಂದ 5 ರವರ ಪರಿಚಯ ಇರುತ್ತದೆ. ಆರೋಪಿಯ ಪರಿಚಯ ಇರುತ್ತದೆ. ದಿನಾಂಕ 14.06.2018 ರಂದು ಬೆಳಿಗ್ಗೆ 11.40ರ ಸಮಯದಲ್ಲಿ ಚಾಸಾ-5 ರವರು  ಕರೆ ಮಾಡಿ ಗೊಲ್ಲರದಿಂಬದ ಬಳಿ 100 ಕೆ.ವಿ. ಟಿ.ಸಿ. ಕೆಟ್ಟು ಹೋಗಿದ್ದು, ಈ ದಿನ ಟಿ.ಸಿ. ಬರುತ್ತದೆ ಎಲ್ಲೂ ಹೋಗಬೇಡಿ ಎಂದು ತಿಳಿಸಿರುತ್ತಾರೆ. ಚಾಸಾ-5 ರವರು ಎಲ್ಲೂ ಹೋಗಬೇಡಿ ಎಂದು ತಿಳಿಸಿದ ಮೇರೆಗೆ ಟಿ.ಸಿ. ಬರುವುದನ್ನು ಕಾದು ನಾನು, ಚಾಸಾ-2 ರಿಂದ 4 ರವರುಗಳು ಕಚೇರಿಯಲ್ಲಿ ಕುಳಿತಿದ್ದೆವು. ಅಷ್ಟರಲ್ಲಿ ಆರೋಪಿ ಕಚೇರಿಗೆ ಬಂದು ಆ ಬೋಳಿಮಗ ಟಿ.ಸಿ. ಕೊಡಲಿಲ್ಲ ಎಂ.ಎಲ್.ಎ. ಅವನು ಓಟು ಹಾಕಿಸಿಕೊಂಡು ಗೆದ್ದು ಟಿ.ಸಿ. ತರಿಸಲು ಯೋಗ್ಯತೆ ಇಲ್ಲ ಎಂದು ಚಾಸಾ-5 ರವರನ್ನು ಬೈದು ಕಚೇರಿಗೆ ಬೀಗ ಹಾಕಲು ಮುಂದಾದನು. ನಂತರ ನಾನು ಬೀಗ ತೆಗೆಯಲು ಹೋದಾಗ ಆತನು ನನ್ನ ಕತ್ತಿನ ಪಟ್ಟಿ ಹಿಡಿದು ನನ್ನನ್ನು ಒಳಕ್ಕೆ ತಳ್ಳಿದನು. ನಂತರ ನನ್ನನ್ನು ಉದ್ದೇಶಿಸಿ ನೀನು ಊರಿಗೆ ಬಂದು ಹೇಗೆ ಕೆಲಸ ಮಾಡುತ್ತೀಯಾ ನೋಡುತ್ತೇನೆ ಎಂದು ಬೆದರಿಕೆ ಹಾಕಿರುತ್ತಾನೆ. ಅದರಿಂದ ನನಗೆ ಕೆಲಸ ಮಾಡಲು ತೊಂದರೆ ಆಗಿರುತ್ತದೆ. ಅದೇ ದಿನ ಸಂಜೆ 4.00 ಗಂಟೆಗೆ ನಾನು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸದರಿ ದಾಖಲಾತಿ ದೂರು ಆಗಿದ್ದು, ಅದನ್ನು ನಿಪಿ-2 ಎಂದು, ಸಾಕ್ಷಿಯು ನಿಪಿ-2 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಮರುದಿನ ಪೊಲೀಸರು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ರಾಮಾಪುರದ ಕೆ.ಇ.ಬಿ. ಕಚೇರಿಗೆ ಒಂದು ಮಹಜರ್ ಕಾರ್ಯ ಜರುಗಿಸಿರುತ್ತಾರೆ. ಪೊಲೀಸರಿಗೆ ನಾನು ಘಟನಾ ಸ್ಥಳವನ್ನು ತೋರಿಸಿರುತ್ತೇನೆ. ಸದರಿ ಮಹಜರ್ ಗೆ ನಾನು, ಚಾಸಾ-2 ರಿಂದ 4 ರವರುಗಳು ಸಹಿ ಮಾಡಿರುತ್ತೇವೆ. ಮಹಜರ್ ಕಾಲದಲ್ಲಿ ಪೊಲೀಸರು ಘಟನಾ ಸ್ಥಳದಲ್ಲಿ ಪೊಟೋ ತೆಗೆದಿರುತ್ತಾರೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸದರಿ ದಾಖಲಾತಿ ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯು ನಿಪಿ-1 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ನಿಪಿ-1ರ ಕಾಲದಲ್ಲಿ ತೆಗೆದ ಪೊಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ತಕರಾರಿಗೆ ಒಳಪಟ್ಟು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು.

ನಾನು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಈ ದಿನ ನ್ಯಾಯಾಲಯದ ಮುಂದೆ ಗೈರುಹಾಜರಾಗಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತಿನ ಬಗ್ಗೆ ತಕರಾರು ಇರುವುದಿಲ್ಲ ಎಂದು ನುಡಿದಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಎಂ. ರಂಜಿತ್ ಕುಮಾರ್)
ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಕೊಳ್ಳೇಗಾಲ.